ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)-1, ವಾಣಿಜ್ಯ ತೆರಿಗೆ ಭವನ, ಕಾಗೋಡು ತಿಮ್ಮಪ್ಪ ಬಡಾವಣೆ, ಅಣಲೆಕೊಪ್ಪ, ಸಾಗರ - 577401.

ದೂರವಾಣಿ ಸಂಖ್ಯೆ: 08183 229384, mail ID: Cto-enf.sagar@ctd.ka.gov.in

ಸಂಖ್ಯೆ: ವಾತೆಅ.(ಜಾರಿ)-1/ಸಾಗರ/ಹರಾಜು/ಟಿ.ನಂ:219/2024-25 ದಿನಾಂಕ: 28/05/2024

ಇವರಿಗೆ,

ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು,
ಇ-ಆಡಳಿತ, ವಾಣಿಜ್ಯ ತೆರಿಗೆ ಕಾರ್ಯಾಲಯ-1
4ನೇ ಮಹಡಿ, ಗಾಂಧಿನಗರ,
ಬೆಂಗಳೂರು-560009.

ಮಾನ್ಯರೇ,

ವಿಷಯ:- ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017 ಕಲಂ-130ರ ಅಡಿಯಲ್ಲಿ ಈ ಕಛೇರಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವ ಎಮ್ ಗೋಲ್ಡ್ ಸೆಂಟೆಡ್ ಟೊಬ್ಯಾಕೊ ಸರಕನ್ನು ಹರಾಜು ಮೂಲಕ ವಿಲೇವಾರಿ ಮಾಡುವ ಸಂಬಂಧ, ಸಾರ್ವಜನಿಕ ಪ್ರಕಟಣೆಯನ್ನು ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸುವ ಕುರಿತು.

ಉಲ್ಲೇಖ: ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017ರ ಪ್ರಕರಣ130ರ ಅಡಿಯಲ್ಲಿ ಹೊರಡಿಸಿರುವ ಆದೇಶ ಜಿಎಸ್‌ಟಿ ನಮೂನೆ -MOV-11 ದಿನಾಂಕ: 26/04/2024

@@@@@@@

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017 ಕಲಂ-130ರ ಅಡಿಯಲ್ಲಿ ಎಮ್ ಗೋಲ್ಡ್ ಸೆಂಟೆಡ್ ಟೊಬ್ಯಾಕೊ (ಒಟ್ಟು 38400 Pouches) ಸರಕನ್ನು ಈ ಕಛೇರಿಯ ಆದೇಶ ಸಂಖ್ಯೆ: 103/2024-25, ದಿನಾಂಕ:26/04/2024ರ ಅನ್ವಯ ಮುಟ್ಟುಗೋಲು ಹಾಕಿಕೊಂಡಿದ್ದು, ಸೃಷ್ಟಿಯಾದ ತಗಾದೆ ದಂಡದ ಬಾಕಿ ಮೊತ್ತವನ್ನು ಪಾವತಿ ಮಾಡದೆ ಇರುವುದರಿಂದ ಸದರಿ ಸರಕನ್ನು ಹರಾಜಿನ ಮೂಲಕ ವಿಲೇವಾರಿ ಮಾಡಿ ಸರ್ಕಾರಕ್ಕೆ ಜಮಾ ಮಾಡುವ ಸಲುವಾಗಿ ಈ ಕಛೇರಿಯಿಂದ ಹೊರಡಿಸಲಾದ ಸಾರ್ವಜನಿಕ ಹರಾಜು ಪ್ರಕಟಣೆಯನ್ನು ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಬೇಕಾಗಿ ತಮ್ಮನ್ನು ಈ ಮೂಲಕ ಕೋರುತ್ತೇನೆ.

ತಮ್ಮ ವಿಶ್ವಾಸಿ,

28/5/24

ವಾಣಿಜ್ಯ ತೆರಿಗೆ ಅಧಿಕಾರಿ
ವಾಣಿಜ್ಯ ತೆರಿಗೆ ಅಧಿಕಾರಿ
(ಜಾರಿ)-1, ಸಾಗರ

ಅಡಕ: ಪತ್ರಿಕಾ ಪ್ರಕಟಣೆಯ ಪ್ರತಿ

ರವಾನಿಸಿದೆ
30/05/24
By RPD

ವಾಣಿಜ್ಯ ತೆರಿಗೆ ಇಲಾಖೆ


**ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)-1, ವಾಣಿಜ್ಯ ತೆರಿಗೆ ಭವನ, ಕಾಗೋಡು ತಿಮ್ಮಪ್ಪ ಬಡಾವಣೆ, ಅಣಲೆಕೊಪ್ಪ, ಸಾಗರ -577401.**

**ದೂರವಾಣಿ ಸಂಖ್ಯೆ: 08183 229384, mail ID: Cto-enf.sagar@ctd.ka.gov.in**


ಸಂಖ್ಯೆ: ವಾತೆಅ.(ಜಾರಿ)-1/ಸಾಗರ/ಹರಾಜು/ಟಿ.ನಂ: /2024-25

ದಿನಾಂಕ: 28/05/2024

**ಎಮ್ ಗೋಲ್ಡ್ ಸೆಂಟೆಡ್ ಟೊಬ್ಯಾಕೊ ಸರಕಿನ ಹರಾಜು ಪ್ರಕಟಣೆ**

ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)-1, ಸಾಗರ ಇವರು ದಿನಾಂಕ: 26-04-2024 ರಂದು ಎಮ್ ಗೋಲ್ಡ್ ಸೆಂಟೆಡ್ ಟೊಬ್ಯಾಕೊ ಸರಕು ಎಂಟು ಬಾಕ್ಸ್‌ಗಳಲ್ಲಿ (ಆರುನೂರ ನಲವತ್ತು ಮಿನಿ ಬಾಕ್ಸ್, ಪ್ರತಿ ಮಿನಿ ಬಾಕ್ಸ್‌ನಲ್ಲಿ 60 ಪೌಚ್‌ಗಳು) ಸರಕನ್ನು ಜಿಎಸ್‌ಟಿ ಕಾಯ್ದೆ 2017, ಕಲಂ-130 ರ ಅಡಿಯಲ್ಲಿ ಮುಟ್ಟು ಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ ತಗಾದೆ ಮೊತ್ತ ರೂ. 3,84,000/- (38,400 ಪೌಚ್‌ಗಳಿಗೆ) ಅನ್ನು ವಸೂಲಿ ಮಾಡುವ ಸಂಬಂಧವಾಗಿ, ಸರಕನ್ನು ಮಾತ್ರ "ಎಲ್ಲಿ ಹೇಗೆ ಇದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ" ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ಆಸಕ್ತಿವುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ ಲಕೋಟೆಯನ್ನು ದಿನಾಂಕ: 07/06/2024 ರಂದು ಪೂರ್ವಾಹ್ನ:11.30ರ ಸಮಯಕ್ಕೆ ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)-1, ಸಾಗರ ಇವರ ಕಛೇರಿಯಲ್ಲಿ ತೆರೆಯಲಾಗುವುದು. ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಆಸಕ್ತಿವುಳ್ಳ ಖರೀದಿದಾರರು ಮುಚ್ಚಿದ ಲಕೋಟೆಯಲ್ಲಿ ಬಿಡ್ ಅನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

**:ಷರತ್ತು ಮತ್ತು ನಿಬಂಧನೆಗಳು:**

(1) ಮುಟ್ಟುಗೋಲು ಹಾಕಿಕೊಂಡಿರುವ ಎಮ್ ಗೋಲ್ಡ್ ಸೆಂಟೆಡ್ ಟೊಬ್ಯಾಕೊ ಸರಕನ್ನು ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)-1, ಸಾಗರ ಕಛೇರಿಯ 1ನೇ ಮಹಡಿಯ ಸಿಬ್ಬಂದಿ ಶಾಖೆಯಲ್ಲಿ ಸಂಗ್ರಹಿಸಿ ಇಡಲಾಗಿರುತ್ತದೆ. ಆಸಕ್ತಿವುಳ್ಳ ಖರೀದಿದಾರರು ದಿನಾಂಕ: 01/06/2024ರಂದು ಕಛೇರಿಯ ವೇಳೆಯಲ್ಲಿ (ಬೆಳಿಗ್ಗೆ: 10.00 ರಿಂದ ಸಂಜೆ: 5:30 ರ ತನಕ) ಸದರಿ ಸರಕನ್ನು ಪರಿಶೀಲಿಸಬಹುದಾಗಿದೆ. (2) ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿವುಳ್ಳ ಖರೀದಿದಾರರು ಅನುಬಂಧದಲ್ಲಿರುವ ಸರಕಿನ ಬಿಡ್‌ಗೆ ಭಾಗವಹಿಸಲು ಇಚ್ಚಿಸಿದಲ್ಲಿ ರೂ. 30,000/-(ರೂಪಾಯಿ ಮೂವತ್ತು ಸಾವಿರ ಮಾತ್ರ) ಮೌಲ್ಯದ ಡಿ.ಡಿ ಮೊತ್ತವನ್ನು Commercial Tax Officer (Enf-1), Sagara ಇವರ ಹೆಸರಲ್ಲಿ ಪಡೆದು ಈ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. (3) ತದನಂತರ ಆಸಕ್ತಿವುಳ್ಳ ಖರೀದಿದಾರರು ಕಡ್ಡಾಯವಾಗಿ ಜಿಎಸ್‌ಟಿ ಕಾಯ್ದೆ ಅಡಿ ನೋಂದಾಯಿತರಾಗಿರಬೇಕು) ಸೀಲು ಮಾಡಿದ ಬಿಡ್ ಲಕೋಟೆ ಜೊತೆಗೆ ಡಿ.ಡಿ ಯನ್ನು ನೋಂದಣಿ ಅಂಚೆ ಅಥವಾ ವೈಯುಕ್ತಿಕವಾಗಿ ದಿನಾಂಕ: 05/06/2024ರ ಸಯಾಂಕಾಲ 5-00 ಘಂಟೆಯ ಒಳಗಾಗಿ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಪೋಸ್ಟಲ್ ವಿಳಂಬಕ್ಕೆ ನಾವು ಜವಾಬ್ದಾರರಾಗಿರುವುದಿಲ್ಲ. (4) ಬಿಡ್ ಮೊತ್ತವನ್ನು ಸರಕಿನ ಪ್ರತಿ ಒಂದು ಪೌಚ್‌ಗೆ ಜಿ.ಎಸ್.ಟಿ ಮತ್ತು ಸೆಸ್ ಒಳಗೊಂಡಂತೆ ರೂಪಾಯಿ ಲೆಕ್ಕದಲ್ಲಿ ನೀಡುವುದು. (5) ಕಾರಣಾಂತರಗಳಿಂದ ಬಿಡ್ ಅನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿ ಹೊಂದಿರುತ್ತಾರೆ. (6) ಯಶಸ್ವಿಯಾದ ಬಿಡ್ಡುದಾರರು ಲಭ್ಯವಿರುವ 38,400 ಪೌಚ್‌ಗಳ ಪೂರ್ಣ ಬಿಡ್ ಮೊತ್ತವನ್ನು 07 (ಏಳು) ದಿನಗಳೊಳಗಾಗಿ ತಾತ್ಕಾಲಿಕ ನೋಂದಣಿ ಪಡೆದು ಇ-ಪಾವತಿ ಮುಖಾಂತರ ಜಿ ಎಸ್ ಟಿ ಲೆಕ್ಕಕ್ಕೆ ಪಾವತಿಸಬೇಕು ಮತ್ತು ಸದರಿ ಖರೀದಿಯನ್ನು ಆನೋಂದಾಯಿತ ಖರೀದಿಯೆಂದು ಪರಿಗಣಿಸಬೇಕು. (7) ನಿಗಧಿತ 07 (ಏಳು) ದಿನಗಳೊಳಗಾಗಿ ಪೂರ್ತಿ ಬಿಡ್ ಮೊತ್ತವನ್ನು ಪಾವತಿ ಮಾಡದೇ ಇದ್ದ ಪಕ್ಷದಲ್ಲಿ ಇಎಂಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (8) ಪೂರ್ತಿ ಬಿಡ್ ಮೊತ್ತವನ್ನು ಪಾವತಿಸಿದ ನಂತರವೇ ಸರಕನ್ನು ಹೇಗೆ ಇದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಹಸ್ತಾಂತರಿಸಲಾಗುವುದು. (9) ಹೆಚ್ಚಿನ ಮಾಹಿತಿ, ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ಕಛೇರಿಯ ಜಾಹಿರಾತು ಫಲಕ ಮತ್ತು ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

28/5/24

ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)-1,

ವಾಣಿಜ್ಯ ತೆರಿಗೆ ಅಧಿಕಾರಿ

(ಜಾರಿ)-1, ಸಾಗರ